<u>2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕುಂದಾಪುರ</u>

**ಅಸಲು ದಾವೆ ಸಂಖ್ಯೆ: 235/2016** **ಪಿ.ಡಬ್ಲ್ಯೂ-1**

ದಿನಾಂಕ:03-12-2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ವಿಧಿಬದ್ಧವಾಗಿ ಪ್ರಮಾಣ ವಚನ ಭೋದಿಸಲಾಯಿತು

<u>ಪಾಟಿ ಸವಾಲು: ಪ್ರತಿವಾದಿ ಪರ ವಕೀಲರಾದ ಶ್ರೀ ಎಂ.ಜೆ.ಎಸ್ ರವರಿಂದ</u>

ಈ ದಾವೆಯ ಬಗ್ಗೆ ನನ್ನ ತಂದೆ ತೀರಿಹೋದ ನಂತರ ಮಾಹಿತಿ ಪಡೆದುಕೊಂಡಿದ್ದೇನೆ. ದಾವೆಯ ಬಗ್ಗೆ ಮಾಹಿತಿಯನ್ನು ಈ ದಾವೆಯ ವಾದಿಯ ವಕೀಲರಿಂದ ಪಡೆದುಕೊಂಡಿದ್ದೇನೆ. ಈ ದಾವೆಯಲ್ಲಿ 1 ರಿಂದ 3 ನೇ ಪ್ರತಿವಾದಿಯರು ಸಲ್ಲಿಸಿರುವ ಆಕ್ಷೇಪವನ್ನು ತಿಳಿದುಕೊಂಡಿದ್ದೇನೆ. ನಿಪಿ-4 ವಿಭಾಗಪತ್ರದಲ್ಲಿ ದಾವಾ ಆಸ್ತಿಗೆ ಸಂಬಂಧಿಸಿದಂತೆ ಹೇಳಿರುವ ಗಡಿಗುರುತುಗಳು ಸರಿ ಇದೆ. ನಿಪಿ-4 ವಿಭಾಗಪತ್ರ ಆಗುವ ಪೂರ್ವದಲ್ಲಿ ದಾವಾ ಎ, ಬಿ ಮತ್ತು ಸಿ ಶೆಡ್ಯೂಲ್ ಸ್ವತ್ತುಗಳು ಸಮಷ್ಟಿ ಕುಟುಂಬದ ಸ್ವಾಧೀನದಲ್ಲಿತ್ತು. ನಿಪಿ-4 ದಾಖಲೆಯಾದ ನಂತರ ವಾದಿ, 1 ನೇ ಪ್ರತಿವಾದಿ ಮತ್ತು ದಿ:ಶಿವರಾಮ ಹೆಗ್ಡೆಯವರು ಅವರ ಪಾಲಿಗೆ ಬಂದಿರುವ ಆಸ್ತಿಯ ಸ್ವಾಧೀನ ಪಡೆದುಕೊಂಡಿದ್ದರು. ಅವರವರ ಹಕ್ಕಿನ ಆಸ್ತಿಗೆ ಗಡಿಗುರುತು ಮಾಡಿಕೊಂಡಿದ್ದಾರೆ.

ನಿಪಿ-4 ರಲ್ಲಿ ನನ್ನ ತಂದೆಗೆ ಕೊಟ್ಟ ಆಸ್ತಿಯ ದಕ್ಷಿಣ ದಿಕ್ಕಿಗೆ ಮಣ್ಣಿನ ದಂಡೆ ಇದೆ. ಮಣ್ಣಿನ ದಂಡೆಯ ಉತ್ತರಕ್ಕೆ ವಾದಿಯ ಅಸ್ತಿ ಇದೆ. ದಕ್ಷಿಣಕ್ಕೆ 1 ರಿಂದ 3 ನೇ ಪ್ರತಿವಾದಿಯರ ಆಸ್ತಿ ಇದೆ. ನನ್ನ ಪ್ರಕಾರ ನನ್ನ ತಂದೆಗೆ ಕೊಟ್ಟ ಆಸ್ತಿಯ ಪೂರ್ವ ದಿಕ್ಕಿಗೆ ಶಿವರಾಮ ಹೆಗ್ಡೆಯವರ ಆಸ್ತಿ ಇದೆ. ದಾವಾ ಎ ಶೆಡ್ಯೂಲ್ ಸ್ವತ್ತಿನ ಪೂರ್ವದ ಅಂಚಿಗೆ ಸರಿಯಾಗಿ ಹಟ್ಟಿ ಕೊಟ್ಟಿಗೆ ಕಟ್ಟಿಸಿದ್ದಾರೆ. ಸದರಿ ಹಟ್ಟಿ ಕೊಟ್ಟಿಗೆ ಪಶ್ಚಿಮ ದಿಕ್ಕಿಗೆ ಮುಖ ಮಾಡಿ ಇದೆ ಎಂದರೆ ಸರಿ. ಹಟ್ಟಿ ಕೊಟ್ಟಿಗೆಯ ಪೂರ್ವ ಬದಿಯ ಹಿಂಬದಿ ಗೋಡೆ, ನನ್ನ ತಂದೆಗೆ ನಿಪಿ-4 ರ ಪ್ರಕಾರ ನೀಡಿದ ಆಸ್ತಿಯ ಪೂರ್ವ ಬದಿಯ ಗಡಿಯಲ್ಲಿದೆ. ನನ್ನ ತಂದೆಯ ಅಸ್ತಿಯ ಪೂರ್ವ ಬದಿಗೆ ಶಿವರಾಮ ಹೆಗ್ಡೆಯವರ ಬಾಬ್ತು ಆಸ್ತಿ ಇದೆ. ಸದರಿ ಆಸ್ತಿಯ ಸ.ನಂಬರ್ ಬೇರೆ. ದಾವಾ ಎ ಶೆಡ್ಯೂಲ್ ಸ್ವತ್ತಿನ ಪೂರ್ವಕ್ಕೆ ಸ.ನಂ 110/3 ರ ಉಳಿಕೆ ಭಾಗ ಇಲ್ಲ. ಸ.ನಂ 110/3 ರ ಪೂರ್ವ ದಿಕ್ಕಿಗೆ 1 ರಿಂದ 3 ನೇ ಪ್ರತಿವಾದಿಯರಿಗೆ ಯಾವುದೇ ಆಸ್ತಿ ಇರುವುದಿಲ್ಲ. ಸ.ನಂ.110-3 ರ ಪೂರ್ವ ದಿಕ್ಕಿನ ತುದಿಯವರೆಗೂ ನನ್ನ ತಂದೆಯ ಹಕ್ಕಿನ ಆಸ್ತಿ ಇದೆ. ನಿಪಿ-4 ರ ಪ್ರಕಾರ ನನ್ನ ತಂದೆಗೆ ನೀಡಿದ ಆಸ್ತಿಯ ಪೂರ್ವ ದಿಕ್ಕಿನಲ್ಲಿ, 1 ರಿಂದ 3 ನೇ ಪ್ರತಿವಾದಿಯರಿಗೆ ಯಾವುದೇ ಅಸ್ತಿಯನ್ನು ಸ.ನಂ 110/3 ರಲ್ಲಿ ನೀಡಿರುವುದಿಲ್ಲ. 1 ರಿಂದ 3 ನೇ ಪ್ರತಿವಾದಿಯರಿಗೆ ನೀಡಿದ ಸ್ಥಳ ದಾವಾ ಎ ಶೆಡ್ಯೂಲಿನ ಪಶ್ಚಿಮ ದಿಕ್ಕಿಗೆ ಇದೆ. ಅವರಿಗೆ ನೀಡಿದ

ಆಸ್ತಿಯಲ್ಲಿ ತೆಂಗಿನತೋಟ ಇದೆ.

ನಿಪಿ-4 ದಾಖಲೆಯಾಗುವ ಪೂರ್ವದಲ್ಲಿ ಉತ್ತರದ ಸ್ತಳ ಮನೆಅಡಿ ಸ್ತಳವಾಗಿತ್ತು ಮತ್ತು ದಕ್ಷಿಣ ಭಾಗ ಖಾಲಿ ಬೆಟ್ಟು ಸ್ತಳವಾಗಿತ್ತು ಎಂದರೆ ನನಗೆ ಗೊತ್ತಿಲ್ಲ. ಖಾಲಿ ಬೆಟ್ಟು ಸ್ತಳಕ್ಕೆ ಹಳ್ಳಿಯಲ್ಲಿ ವಳಾಲು ಎಂದು ಕರೆಯುತ್ತಾರೆಂದರೆ ಸರಿ. ನಿಪಿ-4 ರಲ್ಲಿ  ಶಿವರಾಮ ಹೆಗ್ಡೆಯವರಿಗೆ ನೀಡಿದ ಸ.ನಂ.110/3 ರಲ್ಲಿ 4 ಸೆಂಟ್ಸು ಸ್ತಳವನ್ನು ಮಾದಯ್ಯ ಶೆಟ್ರ ಮನೆ ಅಡಿ ಸ್ತಳ ಎಂದು ಕಾಣಿಸಿದ್ದಾರೆಂದರೆ ಸರಿ . ನನ್ನ ತಂದೆಗೆ ನೀಡಿದ ಸ.ನಂ 110/3 ರಲ್ಲಿ 46 ಸೆಂಟ್ಸು ಸ್ತಳವನ್ನು ಕೂಡಾ ಮಾದಯ್ಯ ಶೆಟ್ರ ಮನೆಅಡಿ ಸ್ತಳ ಎಂದು ಕಾಣಿಸಿದ್ದಾರೆಂದರೆ ಸರಿ. ಶಿವರಾಮ ಹೆಗ್ಡೆಯವರಿಗೆ ನೀಡಿದ ಸ್ತಳ ನನ್ನ ತಂದೆಗೆ ನೀಡಿದ 46 ಸೆಂಟ್ಸಿನ ಪಶ್ಚಿಮ ದಿಕ್ಕಿಗೆ ಇದೆ ಎಂದರೆ ಸರಿ .

1 ರಿಂದ 3 ನೇ ಪ್ರತಿವಾದಿಯರಿಗೆ ಸ.ನಂ 110/3 ರಲ್ಲಿ 50 ಸೆಂಟ್ಸು ಸ್ತಳವನ್ನು ಮಾದಯ್ಯ ಶೆಟ್ರ ವಳಾಲು ಎಂದು ಕಾಣಿಸಿದ್ದಾರೆಂದರೆ ಸರಿ . ನಿಪಿ-4 ರ ಪ್ರಕಾರ 1 ರಿಂದ 3 ನೇ ಪ್ರತಿವಾದಿಯರಿಗೆ 110/3 ರಲ್ಲಿ 50 ಸೆಂಟ್ಸು ಸ್ತಳ ಬಂದ ನಂತರ ತೋಟವನ್ನಾಗಿ ಪರಿವರ್ತಿಸಿದ್ದಾರೆಂದರೆ ಸರಿ. 1 ರಿಂದ 3 ನೇ ಪ್ರತಿವಾದಿಯರ ತೋಟದಲ್ಲಿ ತೆಂಗು, ಅಡಿಕೆ ಮತ್ತು ಸಾಗುವಾನಿ ಮರಗಳು ಇದೆ ಎಂದರೆ ಸರಿಯಲ್ಲ. 1 ರಿಂದ 3 ನೇ ಪ್ರತಿವಾದಿಯರಿಗೆ ನೀಡಿದ 50 ಸೆಂಟ್ಸು ಸ್ತಳದಲ್ಲಿ ನನಗೆ ಯಾವುದೇ ಹಕ್ಕು ಇಲ್ಲ.

ದಾವಾ ಎ ಶೆಡ್ಯೂಲ್ ಸ್ವತ್ತಿನಲ್ಲಿ ನಿಪಿ-4 ಪಾಲುಪಟ್ಟಿ ಆಗುವಾಗ ಹಳೆ ಮನೆ ಇತ್ತು, ಈಗ ಹೊಸ ಮನೆ ಕಟ್ಟಿಸಿದ್ದೇವೆ. ನಾವು ಕಟ್ಟಿದ ಹೊಸಮನೆ  46 ಸೆಂಟ್ಸಿನ ಮಧ್ಯದಲ್ಲಿದೆ. ನಿಪಿ-4 ವಿಭಾಗಪತ್ರದಲ್ಲಿ ಮನೆ  ಅಡಿ ಸ್ತಳವನ್ನು ವಾದಿ ಮತ್ತು ಅವರ ಅಣ್ಣ ಶಿವರಾಮ ಹೆಗ್ಡೆಯವರಿಗೆ ಮತ್ತು  ವಳಾಲು ಸ್ತಳವನ್ನು 1 ರಿಂದ 3 ನೇ ಪ್ರತಿವಾದಿಯ ಕವರು ಕುಟುಂಬಕ್ಕೆ ನೀಡಿದ್ದಾರೆಂದರೆ ಸರಿ.  ವಾದಿ ಮತ್ತು ಅವರ ಅಣ್ಣ ಶಿವರಾಮ ಹೆಗ್ಡೆಯವರ ಮನೆ ಅಡಿ ಸ್ತಳ ಮತ್ತು 1 ರಿಂದ 3 ನೇ ಪ್ರತಿವಾದಿಯರ ಸ್ತಳವನ್ನು ಗಡಿ ಗುರುತು ಮಾಡಿ ಅಳತೆ ಮಾಡಲು ಸರ್ವೆಯರನ್ನು ಕರೆಸಿದ್ದೇವೆ, ಆದರೆ ಅಳತೆ  ಮಾಡಿರುವುದಿಲ್ಲ ಎಂದು ಸಾಕ್ಷಿ ನುಡಿಯುತ್ತಾರೆ.  ಪ್ರತಿವಾದಿಯರು  ಎ ಶೆಡ್ಯೂಲ್ಆಸ್ತಿ ತಮ್ಮ ಸ್ವಾಧೀನದಲ್ಲಿದೆ ಎಂದು ಹೇಳಿದ ಕಾರಣ ಈ ದಾವೆಯನ್ನು  ಹೂಡಿದ್ದೇನೆ. ಸಾಕ್ಷಿಯು ಮುಂದುವರಿದು ನಮ್ಮ ಸ್ತಳ ಪ್ರತಿವಾದಿಯರ ಸ್ವಾಧೀನದಲ್ಲಿ ಇಲ್ಲ ಎಂದು ನುಡಿಯುತ್ತಾರೆ. 2014 ನೇ ಇಸವಿಯಲ್ಲಿ ದಾವಾ ಸ್ತಳಕ್ಕೆ ಸರ್ವೆಯರು ಬಂದಿರುತ್ತಾರೆ. ಸರ್ವೆಯರು ವಾದಿ ಮತ್ತು ಪ್ರತಿವಾದಿಯರಿಗೆ ನೋಟೀಸು ನೀಡಿ ಅಳತೆ ಮಾಡಲು ಬಂದಿರುತ್ತಾರೆ. ಸರ್ವೆ ಅಳತೆ ಮಾಡಲು 1 ರಿಂದ 3 ನೇ ಪ್ರತಿವಾದಿಯವರಿಗೆ  ನೋಟೀಸು ನೀಡಿದ ಬಗ್ಗೆ ನನ್ನ ಬಳಿ ದಾಖಲೆ

ಇದೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ತೊಂದರೆ ಇಲ್ಲ. ದಾವಾ ಎ ಶೆಡ್ಯೂಲ್ ಸ್ಥಳವನ್ನು ಅಳತೆ ಮಾಡಬೇಕೆಂದು ನನ್ನ ತಂದೆ ಅರ್ಜಿ ನೀಡಿರುತ್ತಾರೆ. ಅಳತೆಗೆ ಅರ್ಜಿ ಸಲ್ಲಿಸುವಾಗ ಸ.ನಂ 110/3 ರಲ್ಲಿರುವ ಹಟ್ಟಿಕೊಟ್ಟಿಗೆ ಸ್ಥಳದ ಪೂರ್ವದ ಸ್ಥಳ ಸಹಾ ನನ್ನ ಹಕ್ಕಿನಲ್ಲಿದೆ ಎಂದು ಹೇಳಿರುತ್ತಾರೆ. ದಾವಾ ಶೆಡ್ಯೂಲ್ ಆಸ್ತಿ ಪೂರ್ತಿಯಾಗಿ ಅಳತೆಯಾಗಿರುವುದಿಲ್ಲ. ಅಳತೆಯಾಗದ ಕಾರಣ ಈ ದಾವೆಯನ್ನು ಸಲ್ಲಿಸಿರುತ್ತೇವೆ.

ಮುಂದುವರಿದ ಪಾಟಿ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯಾವಕಾಶ ಕಲ್ಪಿಸಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇ. ಕೇ. ಸರಿ ಇದೆ. ನನ್ನ ಹೇ. ಮೇ. ಬೆ. ಮಾಡಲಾಗಿದೆ

2 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಕುಂದಾಪುರ